## ಬಿಟಿಎಸ್‌ನ ಜನಪ್ರಿಯ ಗೀತೆಗಳು

2021ರಲ್ಲಿ ಬಿಡುಗಡೆಯಾದ 'ಬಟರ್' ಅತಿ ಹೆಚ್ಚು ಜನಪ್ರಿಯವಾದ ಗೀತೆ. ಬರೀ ಒಂದೇ ದಿನದಲ್ಲಿ ಸುಮಾರು 11 ಕೋಟಿ ಜನರು ಅದನ್ನು ನೋಡಿದ್ದರು. 2020ರಲ್ಲಿ ಅನಾವರಣಗೊಂಡ 'ಡೈನಮೈಟ್' ಇನ್ನೊಂದು ಜನಪ್ರಿಯ ಹಾಡು. 'ಫೇಕ್ ಲವ್', 'ಬ್ಲಡ್, ಸ್ವೆಟ್ ಅಂಡ್ ಟಿಯರ್ಸ್', 'ಬಾಯ್ ವಿತ್ ಲವ್', 'ಐ ನೀಡ್ ಯೂ', 'ಸ್ಪ್ರಿಂಗ್ ಡೇ', 'ಫೇಮಸ್', 'ಐಡಲ್', 'ಸಿಲ್ವರ್ ಸ್ಪೂನ್', 'ಡೋಪ್', 'ಡಿಎನ್‌ಎ', 'ಬ್ಲ್ಯಾಕ್ ಸ್ವಾನ್', 'ನಾಟ್ ಟುಡೆ' ಇವೆಲ್ಲವೂ ಹಿಟ್ ಗೀತೆಗಳ ಸಾಲಿಗೇ ಸೇರುತ್ತವೆ. ಈ ಹಾಡುಗಳ ಶೀರ್ಷಿಕೆಗಳೇ ಶಾಲಾ ಮಕ್ಕಳ ತೋಟಿ–ತುಮುಲಗಳನ್ನು ಒಳಗೊಂಡಿರುವುದನ್ನು ಹೇಳುತ್ತವೆ.

ಶಾಲಾ ಹಂತದ ಪ್ರೇಮ, ಮನದಲ್ಲಿ ಏರುವ ತರಂಗಗಳು, ಒಳಗಣ ಹೋರಾಟ, ಅನಿಶ್ಚಿತತೆ ಇವೆಲ್ಲವುಗಳನ್ನು ಸಾಹಿತ್ಯ ಒಳಗೊಳ್ಳುತ್ತದೆ. ತನ್ನತನದ ಪರ್ಯಾಯ ಜಗತ್ತನ್ನು ವಿದ್ಯಾರ್ಥಿಗಳು ಕಟ್ಟಿಕೊಳ್ಳುವಂತೆ ಪ್ರೇರೇಪಿಸಬಲ್ಲ ಅಂಶಗಳನ್ನು ಹಾಡುಗಳನ್ನಾಗಿಸುವುದು ಬಿಟಿಎಸ್ ಜಾಯಮಾನ.



ಅಮೆರಿಕದ ನ್ಯೂಯಾರ್ಕ್‌ನಲ್ಲಿ ಕಾರ್ಯಕ್ರಮ ನೀಡುತ್ತಿರುವ ಬಿಟಿಎಸ್ ತಂಡ

ಕೊರಿಯನ್ ಸಿನಿಮಾಗಳನ್ನು ನೋಡುವುದನ್ನು ವ್ಯಸನವಾಗಿಸಿಕೊಂಡರು; ಅದೂ ಪೈರೆಸಿಯ ಮೂಲಕ. ಆ ಸಿನಿಮಾಗಳಿಗೆ ಮಣಿಪುರದಲ್ಲಿ ಕ್ರಮೇಣ ಒಂದು ಕಳ್ಳ ಮಾರುಕಟ್ಟೆಯೇ ಸೃಷ್ಟಿಯಾಯಿತೆನ್ನಿ. ಅಲ್ಲಿನ ಸ್ಥಳೀಯ ಟೀವಿ ಚಾನೆಲ್‌ಗಳು ಅರಿರಂಗ್ ಹಾಗೂ 'ಕೆಬಿಎಸ್ ವರ್ಲ್ಡ್' ಎಂಬ ಕೊರಿಯನ್ ಕಾರ್ಯಕ್ರಮಗಳನ್ನೂ ಪ್ರಸಾರ ಮಾಡಲಾರಂಭಿಸಿದವು. ಈಶಾನ್ಯ ರಾಜ್ಯಗಳಲ್ಲಿ ಕೆ–ಪಾಪ್ ಸಂಸ್ಕೃತಿ ಹೀಗೆಯೇ ಹಂತಹಂತವಾಗಿ ಹರಡಿಕೊಂಡಿತು.

ಕೊರಿಯನ್ ಸರ್ಕಾರ ಕೂಡ ತನ್ನ ಸಂಸ್ಕೃತಿಯ ಮನರಂಜನೆಗೆ ಭಾರತದ ಈಶಾನ್ಯ ರಾಜ್ಯಗಳಲ್ಲಿ ಮಾರುಕಟ್ಟೆ ಇರುವುದನ್ನು ಮನಗಂಡು ಸ್ಥಳೀಯ ಮಟ್ಟದಲ್ಲೂ ಕೆಲವು ಸ್ಪರ್ಧೆಗಳು, ಪ್ರದರ್ಶನಗಳನ್ನು ಆಯೋಜಿಸಲು ಮುಂದಾಯಿತು. ಕೋವಿಡ್‌ಪೂರ್ವದಲ್ಲೇ ಆದ ಈ ಬೆಳವಣಿಗೆಗಳು ಕ್ರಮೇಣ ಇಡೀ ದೇಶದಲ್ಲಿ ಕೆ–ಪಾಪ್ ಗೀತೆಗಳು ವ್ಯಾಪಿಸಲು ಕಾರಣವಾದವು.

ಸ್ವೀಡನ್‌ನ ಆಡಿಯೊ ಸ್ಟ್ರೀಮಿಂಗ್ ಹಾಗೂ ಮೀಡಿಯಾ ಸರ್ವಿಸ್ ಸೇವೆಯ 'ಸ್ಪಾಟಿಫೈ' ಎಂಬ ಅಪ್ಲಿಕೇಷನ್‌ನಲ್ಲಿ ಯಾವ ಯಾವ ಪ್ರಕಾರದ ಸಂಗೀತ ಇಡೀ ಜಗತ್ತಿನಲ್ಲಿ ಅತಿ ಹೆಚ್ಚು ಬೇಡಿಕೆಯಲ್ಲಿರುತ್ತದೆ ಎಂಬ ಅಂಕಿಅಂಶವೂ ಸಿಗುತ್ತದೆ. 2020ರಲ್ಲಿ 'ಸ್ಪಾಟಿಫೈ' ಕೇಳುಗರ ಪಟ್ಟಿಯಲ್ಲಿದ್ದ ಜನಪ್ರಿಯ ಬ್ಯಾಂಡ್‌ಗಳೆಂದರೆ ಬಿಟಿಎಸ್, ಬ್ಲ್ಯಾಕ್‌ಪಿಂಕ್, ಟ್ವೈಸ್, ಆಗಸ್ಟ್ ಡಿ ಹಾಗೂ ಇಎಕ್ಸ್‌ಒ. ಕೋವಿಡ್ ಕಾಲದಲ್ಲಿ ಕೆ–ಪಾಪ್ ಶ್ರೋತೃಗಳ ಸಂಖ್ಯೆ 350 ಪ್ರತಿಶತ ಹೆಚ್ಚಾಯಿತೆಂದು 'ಗಾನಾ' ಎಂಬ ಆ್ಯಪ್ ಕೂಡ ಹೇಳಿಕೊಂಡಿತು.

'ರೋಲಿಂಗ್ ಸ್ಟೋನ್ ಇಂಡಿಯಾ' ಎಂಬ ನಿಯತಕಾಲಿಕದಲ್ಲಿ ಭಾರತದಲ್ಲಿನ ವಿಶ್ವ ಸಂಗೀತದ ಬಗೆಗೆ ಲೇಖನಗಳು ಪ್ರಕಟವಾಗುತ್ತವೆ. ರಿದ್ಧಿ ಚಕ್ರವರ್ತಿ ಎಂಬ ಪತ್ರಕರ್ತ ಭಾರತದಲ್ಲಿನ ಕೆ–ಪಾಪ್ ಮೋಹದ ಬಗೆಗೆ ಅದರಲ್ಲಿ ಒಂದು ಲೇಖನ ಬರೆದಿದ್ದರು. ಕೋವಿಡ್ ದಿನಮಾನಗಳಲ್ಲಿ ಮೊಬೈಲ್ ಫೋನ್‌ಗಳ ಮೂಲಕ ವಿವಿಧ ಅಪ್ಲಿಕೇಷನ್‌ಗಳಿಂದಾಗಿ ಕೆ–ಪಾಪ್ ಈ ದೇಶದಲ್ಲಿ ಹೆಚ್ಚಾಗಿ ವ್ಯಾಪಿಸತೊಡಗಿತು ಎನ್ನುವುದು ಅವರು ಖುದ್ದು ನಡೆಸಿದ ಸಣ್ಣ ಸಮೀಕ್ಷೆಯಿಂದ ಸ್ಪಷ್ಟವಾಗಿತ್ತಂತೆ. ಅದನ್ನು ಅವರು ಆ ಲೇಖನದಲ್ಲಿ ವಿವರವಾಗಿ ಬರೆದರು.

'ಹಾಲ್ಯೂ ವೇವ್' ಎಂದು ಚೀನಾ ಭಾಷೆಯಲ್ಲಿ ಕೊರಿಯಾ ಸಂಗೀತದ ಜನಪ್ರಿಯತೆಯನ್ನು ಬಣ್ಣಿಸುತ್ತಾರೆ. ಅಲ್ಲಿಯೂ ಈ ಸಂಗೀತ ಕೊರೊನಾ ಸೋಂಕಿನಂತೆ ಹರಡಿತು ಎಂಬ ಮಾತೂ ಇದೆ.

ಸಂಜಯ್ ರಾಮ್‌ಜಿ ಎನ್ನುವವರು ಚೆನ್ನೈನಲ್ಲಿ 'ಕೆವೇವ್ ಇಂಡಿಯಾ ಫ್ಯಾನ್ಸ್ ಕ್ಲಬ್' ಅನ್ನೇ ಸ್ಥಾಪಿಸಿದರು. ನೆಟ್‌ಫ್ಲಿಕ್ಸ್ ವೇದಿಕೆಯಲ್ಲಿನ ಬಗೆಬಗೆಯ ಸಂಗೀತದ ಡಿಜಿಟಲ್ ಲೈಬ್ರರಿಗೆ ಕೆ–ಪಾಪ್‌ಗಳೂ ಸೇರಿಕೊಂಡವು. 2020ರಲ್ಲಿ ಇವನ್ನು ಕೇಳುವವರ ಸಂಖ್ಯೆಯಲ್ಲಿ 370 ಪ್ರತಿಶತ ಹೆಚ್ಚಾಯಿತೆನ್ನುವುದು ಗಮನಾರ್ಹ ವಿದ್ಯಮಾನ.

ಕೊರಿಯನ್ ಪಾಪ್ ಇತ್ತೀಚೆಗಷ್ಟೇ ಗಮನಸೆಳೆಯತೊಡಗಿತೆ ಎಂದರೆ, ಹಾಗೇನೂ ಅಲ್ಲ ಎಂದೇ ಹೇಳಬೇಕಾಗುತ್ತದೆ. ಪಾರ್ಕ್



'ಬ್ಲ್ಯಾಕ್‌ಪಿಂಕ್' ತಂಡದ ಈ ತರುಣಿಯರ ಮೋಡಿಗೆ ಒಂದಿಡೀ ಪೀಳಿಗೆ ತಲೆದೂಗುತ್ತಿದೆ